# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ 193/2020

ಪಿ.ಡಬ್ಲ್ಯೂ- 4
ಸಿ.ಡಬ್ಲೂ- 11

| | | |
|---|---|---|
| ಹೆಸರು | ಃ- | ತಿಮ್ಮಪ್ಪ ಕೊರವರ |
| ತಂದೆ / ಗಂಡನ ಹೆಸರು | ಃ- | ಯಮನಪ್ಪ |
| ವಯಾ | ಃ- | 51 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಅಣ್ಣಿಗೇರಿ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 22-11-2025 |

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

1) ಆರೋಪಿತರ ಪರಿಚಯವಿದೆ. ಚಾಸಾ-1, ಚಾಸಾ-12 ರಿಂದ ಚಾಸಾ-15 ರವರ ಪರಿಚಯವಿದೆ.

2) ದಿನಾಂಕ 15-01-2020 ರಂದು ನನಗೆ ಪೊಲೀಸರು ಸವಲಾರ ಸೇತುವೆ ಬಳಿ ನನಗೆ ಹಾಗೂ ಚಾಸಾ-10 ರವರಿಗೆ ರಸ್ತೆ ಅಪಘಾತದ ಬಗ್ಗೆ ಪಂಚನಾಮೆಗೆಂದು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಮುಗಿಸಿ ಠಾಣೆಗೆ ಬಂದಿರುತ್ತೇವೆ. ಠಾಣೆಯಲ್ಲಿ ವಾಹನದ ಬಗ್ಗೆ ಪಂಚನಾಮೆ ಮಾಡಿರುತ್ತಾರೆ. ಸ್ಥಳದಲ್ಲಿ ವಿವರಣೆ ಮಾಡಿ ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಹಾಗೂ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-6 ರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ನಂತರದಲ್ಲಿ ಅಲ್ಲಿಯೆ ಒಂದು ಕಚ್ಚಾ ನಕಾಶೆಯನ್ನು ಬಿಡಿಸಿರುತ್ತಾರೆ. ಸದರಿ ಕಚ್ಚಾ ನಕಾಶೆಯು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಆನಂತರ ನಿಪಿ-8 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಅದರಲ್ಲಿ ನಾನು ಮತ್ತು ಚಾಸಾ-10 ರವರು ಇರುತ್ತೇವೆ.

3) ಸಾಕ್ಷಿಯು ನಿಪಿ-9 ತೋರಿಸಿ ಅದು ವಾಹನ ಜಪ್ತು ಪಂಚನಾಮೆ ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿ.ಪಿ.9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆ ಕಾಲಕ್ಕೆ ತೆಗೆದ 3 ಛಾಯಾಚಿತ್ರಗಳನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-10 ರಿಂದ ನಿಪಿ-12 ಎಂದು ಗುರುತಿಸಲಾಗಿರುತ್ತದೆ. ನಿಪಿ-10 ರಲ್ಲಿ ನಾನು, ಚಾಸಾ-10 ಹಾಗೂ ಪೊಲೀಸರು ಇರುತ್ತೇವೆ. ನಿಪಿ-11 ಮತ್ತು ನಿಪಿ-12 ರಲ್ಲಿ ಅಪಘಾತಕ್ಕೆ ಒಳಗಾದ ವಾಹನವು ಠಾಣೆಯಲ್ಲಿ ಇದ್ದವು.

*(*ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ**,** ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು**.***)*

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

1) ಸದರಿ ಘಟನೆಯ ಬಗ್ಗೆ ದಿನಾಂಕ 15-01-2020 ರಂದು ಚಾಸಾ-1 ರವರ ನಿರ್ದೇಶನದ ಮೇರೆಗೆ ಘಟನಾ ಸ್ಥಳವಾದ ಹುಬ್ಬಳ್ಳಿ ರಸ್ತೆಯ ಸವಳ ಹಳ್ಳದ ಸೇತುವೆ ಬಳಿ ಬೆಳಗ್ಗೆ 10-30 ರಿಂದ 11-00 ಗಂಟೆಯ ವರೆಗೆ ನನ್ನ ಹಾಗೂ ಚಾಸಾ-10 ರವರ ಸಮಕ್ಷಮದಲ್ಲಿ ನಿಪಿ-6 ರ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಅಪಘಾತಕ್ಕೆ ಒಳಗಾದ ಅಶೋಕ ಲೈಲ್ಯಾಂಡ ಕೆ ಎಸ್ ಆರ್ ಟಿ ಸಿ ಬಸ್ಸ ಸಂಖ್ಯೆ ಕೆಎ 26 ಎಫ್ 877 ಹಾಗೂ ಬಜಾಜ ಡಿಸ್ಕವರ ದ್ವಿಚಕ್ರ ವಾಹನ ಸಂಖ್ಯೆ ಕೆಎ 63 ಹೆಚ್ 8798 ನೇದ್ದರನ್ನು ಠಾಣೆಗೆ ತಂದು ಇರಿಸಿ ಅದರ ಪಂಚನಾಮೆಯನ್ನು ದಿನಾಂಕ 15-01-2020 ರಂದು ಮದ್ಯಾಹ್ನ 12-00 ರಿಂದ 12-45 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-10 ರವರ ಸಮಕ್ಷಮದಲ್ಲಿ ನಿಪಿ-9 ರಂತೆ ಮಾಡಿ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಕಾಲಕ್ಕೆ ಚಾಸಾ-1 ರವರು ವಾಹನವನ್ನು ಗುರುತು ಮಾಡಿರುತ್ತಾರೆ ಎಂದರೆ ಸರಿ.

2) ನಿಪಿ-11 ಛಾಯಾಚಿತ್ರದಲ್ಲಿ ಅಪಘಾತವಾದ ವಾಹನದ ಜಖಂಗಳನ್ನು ಹಾಗೂ ತೀವ್ರತೆಯನ್ನು ಪಂಚನಾಮೆಯಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಅಪಘಾತ ಸ್ಥಳದ ಬಗ್ಗೆ ಸ್ವವಿಸ್ತಾರವಾದ ಕಚ್ಚಾ ನಕಾಶೆಯನ್ನು ನಿಪಿ-7 ರಂತೆ ಬಿಡಿಸಿರುತ್ತಾರೆ ಎಂದರೆ ಸರಿ. ನಿಪಿ-6 , ನಿಪಿ-7 ಹಾಗೂ ನಿಪಿ-9 ನ್ನು ಓದಿ ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿ.

<u>*ಪಾಟೀಸವಾಲು ಆರೋಪಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ-*</u>

1) ಅಣ್ಣಿಗೇರಿಯ ಕುರಬಗೇರಿ ಓಣಿಯಲ್ಲಿ ನನ್ನ ಮನೆ ಬರುತ್ತದೆ. ಮೃತರು ನನ್ನ ಓಣಿಯವರು ಎಂದರೆ ಸರಿ. ಪಂಚನಾಮೆಗೆ ನಾನು ಬಸ್ಸ ನಿಲ್ದಾಣದಲ್ಲಿದ್ದಾಗ ಸುಮಾರು 10-00 ಗಂಟೆಯಾಗಿದ್ದು ಪೊಲೀಸರು ಕರೆದಿರುತ್ತಾರೆ. ಪೊಲೀಸರು ಜೀಪನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಸುಮಾರು 10 ನಿಮಿಷದಲ್ಲಿ ಘಟನಾ ಸ್ಥಳಕ್ಕೆ ಮುಟ್ಟಿರುತ್ತೇವೆ. ಘಟನಾ ಸ್ಥಳ ಹಾಗೂ ಅಣ್ಣಿಗೇರಿ ಬಸ್ಸ ನಿಲ್ದಾಣವು ಸುಮಾರು 2-3 ಕೀಲೋಮೀಟರ ಅಂತರದಲ್ಲಿರುತ್ತದೆ.

2) ಘಟನಾ ಸ್ಥಳದಲ್ಲಿ ಸುಮಾರು ಒಂದು ಗಂಟೆ ಕಾಲ ಇದ್ದೆವು ನಿಖರವಾಗಿ ಹೇಳಲು ಬರುವುದಿಲ್ಲ. ನಿಪಿ-6 ನ್ನು ಪೊಲೀಸರು ಬರೆದಿರುತ್ತಾರೆ ಹೆಸರು ಗೊತ್ತಿಲ್ಲ. ನಿಪಿ-6 ಬರೆಯಲು ನಾನು ಮಾಹಿತಿ ನೀಡಿಲ್ಲ. ನಿಪಿ-6(ಬಿ) ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-6 ನ್ನು ಬರೆದ ಪೊಲೀಸರು ಓದಿ ಹೇಳಿರುತ್ತಾರೆ. ನಿಪಿ-6 ರಲ್ಲಿ ಬರೆದ ವಿಷಯದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲಾ. ಪೊಲೀಸರ ನಿರ್ದೇಶನದ ಮೇರೆಗೆ ನಿಪಿ-6 ರಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-8 ರಲ್ಲಿ ನಾನು ಪಶ್ಚಿಮ ದಿಕ್ಕಿಗೆ ಮುಖ ಮಾಡಿ ನಿಂತಿರುತ್ತೇನೆ ಎಂದರೆ ಸರಿ.

3) ಸಾಕ್ಷಿಗೆ ಈಗ ನಿಪಿ-8 ತೋರಿಸಿ ಅದರಲ್ಲಿ ನಾನು ನಿಂತ ಬಲದಿಕ್ಕಿಗೆ ಘಟನಾ ಸ್ಥಳ ಇದೆ ಎಂದರೆ ಸರಿ. ನಿಪಿ-9(ಬಿ) ನ್ನು ಅದೇ ದಿನ ಮಾಡಿರುತ್ತೇನೆ. ಆಗ ಸಮಯ 12-00 ಗಂಟೆಯಾಗಿರಬಹುದು. ನಿಪಿ-9 ನ್ನು ಓದಿ ಹೇಳಿರುತ್ತಾರೆ ನನಗೆ ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ನಿಪಿ-9 ರ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ನಿಪಿ-10 ರಿಂದ ನಿಪಿ-12 ನ್ನು ಪೊಲೀಸರು ತೆಗೆದಿರುತ್ತಾರೆ ಹೆಸರು ಗೊತ್ತಿಲ್ಲ. ಎಲ್ಲಾ ಪಂಚನಾಮೆಗಳಿಗೆ ಪೊಲೀಸರ ನಿರ್ದೇಶನದ ಮೇರೆಗೆ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಮರು ವಿಚಾರಣೆ ಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**